

ಚಿತ್ರಗಳು: ಸತೀಶ ಬಡಿಗೇರ

ಉಡುಪಿ ಜಿಲ್ಲೆಯ ಬಾರ್ಕೂರು ಮೂಲದ **ಫಕೀರ್ ಮುಹಮ್ಮದ್ ಕಟ್ಪಾಡಿ** ಕನ್ನಡದ ಪ್ರಮುಖ ಕಥೆಗಾರ–ಕಾದಂಬರಿಕಾರ. ಬ್ಯಾಂಕ್ ಅಧಿಕಾರಿಯಾಗಿ ನಿವೃತ್ತರಾಗಿ ಅವರೀಗ ಬೆಂಗಳೂರು ವಾಸಿ. ಮುಸ್ಲಿಂ ಸಮುದಾಯದ ಸಂವೇದನೆಗಳನ್ನು ಪರಿಚಯಿಸುವ ಮೂಲಕ ಕನ್ನಡ ಸಾಹಿತ್ಯದ ಚೌಕಟ್ಟನ್ನು ಹಿಗ್ಗಲಿಸಿದ ಕಟ್ಪಾಡಿಯವರು, ತಮ್ಮೆಲ್ಲ ಕಥೆ–ಕಾದಂಬರಿಗಳ ಮೂಲಕ ವ್ಯಕ್ತಿಯ ಅಂತರಂಗ ಹಾಗೂ ಸಮಾಜದಲ್ಲಿನ ಆಂತರ್ಯದಲ್ಲಿನ ಒಳಿತನ್ನು ಎತ್ತಿತೋರುವ ಕೆಲಸ ಮಾಡಿದ್ದಾರೆ. ಆರು ಕಥಾಸಂಕಲನಗಳು, ಎರಡು ಕಾದಂಬರಿಗಳನ್ನು ಪ್ರಕಟಿಸಿದ್ದಾರೆ (‘ಸರಕುಗಳು’ ಹಾಗೂ ‘ದಜ್ಜಾಲ’). ಸೂಫಿ ಸಾಹಿತ್ಯ–ವಿಚಾರದಲ್ಲೂ ಆಸಕ್ತರಾಗಿರುವ ಅವರು ‘ಮಯೂರ’ಕ್ಕೆ ನೀಡಿದ ಸಂದರ್ಶನದ ಆಯ್ದ ಭಾಗ ಇಲ್ಲಿದೆ.



